ಇ) ಪೂರ್ಣಗೊಳ್ಳದೆ ಇದ್ದಲ್ಲಿ ಗುತ್ತಿಗೆದಾರನ ಮೇಲೆ ಸರ್ಕಾರವು ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು).

ಅ) ನಬಾರ್ಡ್ ಕಾಮಗಾರಿಗಳಿಗೆ ತಾಲ್ಲೂಕುವಾರು ಹಣ ಬಿಡುಗಡೆ ಮಾಡಿರುವುದಿಲ್ಲ, ಆದರೆ 98-99ನೇ ಸಾಲಿನಲ್ಲಿ ರೂ.7.38ಲಕ್ಷ ವೆಚ್ಚ ಮಾಡಲಾಗಿದೆ. ಒಟ್ಟಾರೆ ಈವರೆಗೆ ಲೋಕೋಪಯೋಗಿ ಇಲಾಖೆಯಡಿ ಕೆಳಕಂಡ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

1. ಬೀರೂರು ಅಜ್ಜಂಪುರ ರಸ್ತೆಯಿಂದ ಬೀರೂರು ಲಿಂಗದಹಳ್ಳಿ ಸೇರುವ ರಸ್ತೆ 30.00 ಲಕ್ಷ ರೂ

2. ಅಜ್ಜಂಪುರ ಬುಕ್ಕಾಂಬುಧಿ ರಸ್ತೆಯಿಂದ ಹುಣಸೆಘಟ್ಟ ಸೇರುವ ರಸ್ತೆ-28.10ಲಕ್ಷ ರೂ

3. ತರೀಕೆರೆ ಹೊಸದುರ್ಗ ರಸ್ತೆ-12.1ಲಕ್ಷ ರೂ

4. ಕಲ್ಲೇನಹಳ್ಳಿಯಿಂದ ಕಾರೆಕೆರೆ ಬೀರೂರು ಶಿವನಿ ಸೇರುವ ರಸ್ತೆ-23.00ಲಕ್ಷರೂ ಶಿವನಿ

5. ತರೀಕೆರೆ ಹಾದಿಕೆರೆ ನೇರಳಕೆರೆ ರಸ್ತೆ-11.92 ಲಕ್ಷ ರೂ

6. ಅಜ್ಜಂಪುರ ಕಣಬಗಟೆಯಿಂದ ಶಿವನಿ ಬುಕ್ಕಾಂಬುಧಿ ಸೇರುವ ರಸ್ತೆ-29.1ಲಕ್ಷ ರೂ

ಆ) ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಯಾವುದೂ ಪೂರ್ಣಗೊಂಡಿರುವುದಿಲ್ಲ.

ಇ) ಕುಂಠಿತ ಪ್ರಗತಿ ಸರಿದೂಗಿಸುವಂತೆ ಗುತ್ತಿಗೆದಾರರಿಗೆ ನೋಟೀಸ್ ನೀಡಲಾಗಿದ್ದು, ಗುತ್ತಿಗೆ ಕರಾರಿನಂತೆ ಕ್ರಮ ಕೈಗೊಳ್ಳಲಾಗುವುದು.

ನಬಾರ್ಡ್‌ನಿಂದ ತರೀಕೆರೆ ತಾಲ್ಲೂಕಿಗೆ ಬಿಡುಗಡೆ ಮಾಡಿದ ಹಣ

1725 (2143) ಶ್ರೀ ನೀಲಕಂಠಪ್ಪ ಬಿ.ಆರ್.(ತರೀಕೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕು ನಬಾರ್ಡ್ ರಸ್ತೆಗಳಿಗಾಗಿ 1999-2000ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು;

ಆ) ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ;

ಇ) ಯಾವ ಯಾವ ಕಾಮಗಾರಿಗಳು ಮುಗಿದಿರುತ್ತದೆ;

ಈ) ಬಾಕಿ ಉಳಿದಿರುವ ಕಾಮಗಾರಿಗಳು ಯಾವಾಗ ಮುಕ್ತಾಯಗೊಳ್ಳಲಿವೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ನಬಾರ್ಡ್ ಅಡಿಯಲ್ಲಿ ತಾಲ್ಲೂಕುವಾರು ಹಣವನ್ನು ಬಿಡುಗಡೆ ಮಾಡಿರುವುದಿಲ್ಲ, ಆದರೆ 99-2000 ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಡಿ ಮಂಜೂರಾದ ನಬಾರ್ಡ್